ಪರಿಹಾರ ಧನವನ್ನು ಆದಷ್ಟು ಬೇಗ ಪಾವತಿಸಲಾಗುವುದು. ಹೊನ್ನಳ್ಳಿ ಕೆರೆಯಲ್ಲಿ ಹೊನ್ನಳ್ಳಿ ಮತ್ತು ಉಜಳಂಬ ಗ್ರಾಮಗಳ ಭೂಮಿಗಳು ಸೇರಿವೆ. ಸಿರ್ಗಾಪುರ ಕೆರೆಯಲ್ಲಿ ಸಿರ್ಗಾಪುರ ಮತ್ತು ಸರಜವಳಗಾ ಗ್ರಾಮಗಳ ಭೂಮಿ ಸೇರಿವೆ ಮತ್ತು ಅಲಗೂಡ ಕೆರೆಯಲ್ಲಿ ಕೇವಲ ಅಲಗೂಡ ಗ್ರಾಮದ ಭೂಮಿ ಸೇರಿದೆ.

ಬೀದರ್ ಜಿಲ್ಲೆಯಲ್ಲಿರುವ ಸಣ್ಣ ಕೆರೆಗಳ ಅಚ್ಚುಕಟ್ಟು ಪ್ರದೇಶ

2386 (2910) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಬೀದರ್ ಜಿಲ್ಲೆಯಲ್ಲಿರುವ ಒಟ್ಟು ಸಣ್ಣ ಕೆರೆಗಳ ಸಂಖ್ಯೆ ಎಷ್ಟು? ಅವುಗಳ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣವೆಷ್ಟು? (ಕ್ಷೇತ್ರವಾರು ವಿವರ ನೀಡುವುದು)

ಅ) ಬಸವ ಕಲ್ಯಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿರುವ ಸಣ್ಣ ಕೆರೆಗಳ ಸಂಖ್ಯೆ ಹಾಗೂ ಅಚ್ಚುಕಟ್ಟು ಪ್ರಮಾಣದ ವಿಸ್ತೀರ್ಣವೆಷ್ಟು, ನಿರ್ಮಾಣ ಮಾಡುವ ಗುರಿ ಎಷ್ಟು? ಹಾಲಿ ಬಳಕೆಯಲ್ಲಿರುವ ಅಚ್ಚುಕಟ್ಟು ಪ್ರದೇಶದ ಪ್ರಮಾಣ ಎಷ್ಟು? ಯೋಜನೆಯಲ್ಲಿರುವ ಅಚ್ಚುಕಟ್ಟು ಪ್ರಮಾಣವನ್ನು ಪೂರ್ಣವಾಗಿ ಬಳಕೆಯಲ್ಲಿ ತರಲು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ಸಣ್ಣ ನೀರಾವರಿ ವಿಭಾಗದ ವ್ಯಾಪ್ತಿಯಲ್ಲಿ 40 ಹೆಕ್ಟೇರ್ ಮತ್ತು ಮೇಲ್ಪಟ್ಟ ಅಚ್ಚುಕಟ್ಟು ಹೊಂದಿರುವ ಒಟ್ಟು 83 ಕೆರೆಗಳು ಅಸ್ತಿತ್ವದಲ್ಲಿವೆ. ಕ್ಷೇತ್ರವಾರು ವಿವರ ಕೆಳಗಿನಂತಿದೆ.

		ಕೆರೆಗಳು	ಅಚ್ಚಕಟ್ಟು ಹೆಕ್ಟೇರುಗಳಲ್ಲಿ
1)	ಬೀದರ್	15	1362
2)	ಔರಾದ್	27	8041
3)	ಭಾಲ್ಕಿ	12	3113
4)	ಹುಮನಾಬಾದ್	15	2832
6)	ಹುಲಸೂರ	04	405
	ಒಟ್ಟು	83	17904

ಅ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ 10 ಸಣ್ಣ ನೀರಾವರಿ ಕೆರೆಗಳಿದ್ದು ಅವುಗಳ ವಿನ್ಯಾಸ ಮತ್ತು ಅಚ್ಚುಕಟ್ಟು 2151 ಹೆಕ್ಟೇರ್. ಆ ಪೈಕಿ 98-99 ರಲ್ಲಿ 177.70 ಹೆಕ್ಟೇರು 99-2000 ರಲ್ಲಿ 153.70 ಹೆಕ್ಟೇರು ರಷ್ಟು ಭೂಮಿಗೆ ನೀರಾವರಿ ಒದಗಿಸಲಾಗಿದೆ.

ಹೊನ್ನಳ್ಳಿ ಮತ್ತು ಸಿರ್ಗಾಪೂರ ಕೆರೆಗಳು 2000 ರಲ್ಲಿ ಪೂರ್ಣಗೊಂಡಿದ್ದು ನೀರಾವರಿಗೆ ಉಪಯೋಗಿಸಲಾಗುತ್ತಿದೆ.

ಅಲಗೋಡ ಕೆರೆ ಆಗಸ್ಟ್ 1999ರಲ್ಲಿ ಒಡ್ಡು ಒಡೆದಿರುವುದರಿಂದ ನೀರು ಸಂಗ್ರಹಣೆಯಾಗಿಲ್ಲ. ಈ ವರ್ಷ ಪೂರ್ಣ ನಿರ್ಮಾಣವಾಗಿದ್ದು ನೀರಾವರಿ ಆಗಲಿದೆ.

ಕೆರೆಗಳು ವಾರ್ಷಿಕ ನಿರ್ವಹಣೆ ಅನುದಾನ ಸಾಕಾಗುತ್ತಿಲ್ಲವಾದ್ದರಿಂದ ಎಲ್ಲಾ ಕೆರೆಗಳನ್ನು ಒಮ್ಮೆಲೆ ಸುಸ್ಥಿತಿಗೆ ತರಲು ಸಾಧ್ಯವಾಗದ ಕಾರಣ ಹಂತ ಹಂತವಾಗಿ ಸುಧಾರಣೆ ಮಾಡಿ ನಿಗಧಿತ ಗುರಿ ಸಾಧಿಸಲು ಸಾಧ್ಯವಾದ ಎಲ್ಲಾ ಪ್ರಯತ್ನ ಮಾಡಲಾಗುವುದು.

ಬೀದರ್ ಜಿಲ್ಲೆಯಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಜಲಸಂವರ್ಧನೆ ಯೋಜನೆ

2388(2912) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಲ ಸಂವರ್ಧನೆಗಾಗಿ ನಿಗಧಿಪಡಿಸಿದ ಕೆರೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಆ) ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಜಲಸಂವರ್ಧನೆಗಾಗಿ ಗುರುತಿಸಿರುವ ಕೆರೆಗಳ ಸಂಖ್ಯೆ ಎಷ್ಟು ; ಗ್ರಾಮವಾರು ಕೆರೆಗಳ ವಿವರ ನೀಡುವುದು.

ಇ) ಇದಕ್ಕೆ ತಗಲುವ ವೆಚ್ಚವೆಷ್ಟು; ಸದರಿ ಯೋಜನೆಗಳನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಇನ್ನೂ ನಿರ್ಧರಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.